# 32 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

## ಸಿಸಿ ನಂಃ 31209/2022

**CW.6 PW.2**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಅನಿಲ್ ಕುಮಾರ್ |
| **ತಂದೆಯ ಹೆಸರು** | : | ಕಾಶಿರಾಯ |
| **ವಯಸ್ಸು** | : | 33 ವರ್ಷ |
| **ಉದ್ಯೋಗ** | : | ಮುಖ್ಯ ಪೇದೆ |
| **ವಾಸಸ್ಥಳ** | : | ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 10.08.2023 ರಂದು ಕರೆಸಿ ಪ್ರತಿಜ್ಞಾ ವಿಧಿ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು ಸುಮಾರು 2 ವರ್ಷಗಳಿಂದ ಇಲ್ಲಿಯವರೆಗೆ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕೆಲಸ ನಿರ್ವಹಿಸಿರುತ್ತೇನೆ.

2. ದಿನಾಂಕ 27.07.2022 ರಂದು ರಾತ್ರಿ 10 -00 ಗಂಟೆ ಸಮಯದಲ್ಲಿ ಹೊಯ್ಸಳ ನಂ 6 ರಲ್ಲಿ ರಾತ್ರಿ ಗಸ್ತು ನಾನು ಮುತ್ತ ಚಾಸಾ-7 ರವರು ಕರ್ತವ್ಯಕ್ಕೆ ನೇಮಕ ಗೊಂಡಿರುತ್ತೇವೆ. ರಾತ್ರಿ ಸುಮಾರು 10 -00 ಗಂಟೆ ರಾಜೀವ್ ಗಾಂಧಿ ಸರ್ಕಲ್ ಜಿ.ಎಸ್.ಬಿ ಜನಕ್ಷನ್ ಬಳಿ ಇದ್ದಾಗ ಮಳೆ ಬರುತ್ತಿತ್ತು. ಮಳೆಯ ಕಾರಣ ವಾಹವನ್ನು ರಸ್ತೆಯ ಎಡ ಭಾಗದಲ್ಲಿ ನಿಲ್ಲಿಸಿದ್ದೆವು. ಮಳೆ ಬರುವ ಸುಯದಲ್ಲಿ ಚಾಸಾ-1 ರವರು ನಮ್ಮ ವಾಹನದ ಬಳಿ ಬಂದು ಜಿ.ಎಸ್.ಬಿ ಜನಕ್ಷನ್ ಬಳಿ ಕರೆದುಕೊಂಡು ಹೋಗಿ ಎಂದು ಕೇಳಿ ವಾಹನವನ್ನು ಹತ್ತಿದ್ದರು. ಸುಮಾರು10-30 ರ ಸಮಯದಲ್ಲಿ ಯಾರೋ ಒಬ್ಬ ಆಸಾಮಿ ಉಪ್ಪಾರ ಪೇಟೆ ಕಡೆಯಿದ ಮಂತ್ರಿ ಮಾಲ್ ಕಡೆಗೆ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದನು. ಆ ವ್ಯಕ್ತಿ ಜಿ.ಎಸ್.ಬಿ ಜನಕ್ಷನ್ ಸಿಗ್ನಲ್ ಬಳಿ ನಿಂತಿದ್ದಾಗ ನಮ್ಮ

ವಾಹನವನ್ನು ನೋಡಿ ಏ ಪೋಲೀಸ್ ಏಕೆ ಒನ್ ವೇ ನಲ್ಲಿ ಹೋಗುತ್ತಿದ್ದೀರಾ ಎಂದು ಕೇಳಿದರು. ಆಗ ನಾವುಗಳು ನಾವು ಒನ್ ವೇ ನಲ್ಲಿಹೋಗುತ್ತಿಲ್ಲ ಮಳೆ ಬರುತ್ತಿರುವ ಕಾರಣ ವಾಹನವನ್ನು ನಿಲ್ಲಿಸಿಕೊಂಡಿದ್ದೇವೆ ಎಂದು ಹೇಳಿದರು ಆದರೂ ಸಹ ಆ ವ್ಯಕ್ತಿ ನಮ್ಮನ್ನು ಕುರಿತು ಏರು ಧ್ವನಿಯಲ್ಲಿ ಏ ಹೋಗೋ ಎಂದು ಹೇಳಿದರು. ಆಗ ಚಾಸಾ-1 ರವರು ವಾಹನದಿಂದ ಕೆಳಗೆ ಇಳಿದು ಏಕಪ್ಪ ಹೀಗೆ ಮಾತನಾಡುತ್ತೀಯಾ ಎಂದು ಕೇಳಿದರು ಆಗ ಏಕಾಏಕಿ ತನ್ನ ದ್ವಿಚಕ್ರ ವಾಹನವನ್ನು ಚಾಸಾ-1 ರವರ ಕಾಲಿನ ಮೇಲೆ ಹತ್ತಿಸಿರುತ್ತಾನೆ. ಆದ್ದರಿಂದ ಚಾಸಾ-1 ರವರ ಪಾದ ಹಾಗೂ ಮೊಣಕಾಲಿಗೆ ಗಾಯ ಉಂಟಾಯಿತು.

3. ಸದರಿ ವಾಹನ ಪರಿಶೀಲನೆ ಮಾಡಲಾಗಿ ಆ ವಾಹನ ಸಂಖ್ಯೆ ಕೆ.ಎ.02.ಕೆ.ಎಮ್. 6952 ಆಗಿತ್ತು ಆ ವ್ಯಕ್ತಿ ಹೆಸರು ಕೇಳಲಾಗಿ ಆತನ ಹೆಸರು ಮಹವೀರ್ ಹೋಸೂರ್ ಎಂದು ಗೊತ್ತಾಯಿತು. ನಂತರ ಆ ವ್ಯಕ್ತಿ ಹಾಗೂ ವಾಹನಮ್ನು ನಮ್ಮ ವಶಕ್ಕೆ ಪಡೆದುಕೊಂಡು ರಾತ್ರಿ 11-00 ಗಂಟೆಗೆ ಠಾಣೆಗೆ ತಂದು ಹಾಜರು ಪಡಿಸಿರುತ್ತೇವೆ. ಆರೋಪಿತನನ್ನು ಮತ್ತು ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲಿಗಾಗಿಃ** ಆರೋಪಿ ಪರ ವಕೀಲರು ಗೈರು ಹಾಜರಾಗಿರುತ್ತಾರೆ. ಆರೋಪಿ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸ ಇ**

**(ಲತಾ.ಜೆ),**

**32 ನೇ ಎ.ಸಿ.ಎಂ.ಎಂ. ಬೆಂಗಳೂರು.**